

ಅವಳು ಅದನ್ನೆಲ್ಲಾ ಆ ಕಡೆ ಸರಿಸಿದಳು. ಅವನಿಗೆ ಬಗೆ ಬಗೆಯ ತಿಂಡಿಗಳನ್ನು ಕೊಟ್ಟಳು, ನೋಡುವುದಕ್ಕೇ ಚೆಂದಕ್ಕಿದ್ದವು. ತುಂಬ ತುಂಬಾನೆ ರುಚಿಯಾದವು

ಋಷ್ಯಶೃಂಗನಿಗೆ ಅದು ತುಂಬಾ ಇಷ್ಟ ಆಯಿತು. ಪರಿಮಳದ ಮಾಲೆಗಳನ್ನು ಕೊಟ್ಟಳು. ಫಳಫಳ ಅಂತ ಹೊಳೆಯುವ ವಿಚಿತ್ರ ಬಟ್ಟೆಗಳನ್ನು ಕೊಟ್ಟಳು. ಕುಡಿದಷ್ಟೂ ಖುಷಿಯಾಗುವ ಪೇಯವನ್ನು ಕೊಟ್ಟಳು. ನಕ್ಕಳು. ಕುಣಿದಾಡಿದಳು.

ಚೆಂಡು ತೆಗೆದುಕೊಂಡು ಅವನ ಮೇಲೆ ಎಸೀತಾ ಆಡತಾ, ತನ್ನ ಮೈಯಿಂದ ಅವನ ಮೈಗೆ ಸೋಕಿಸತಾ, ಹಣ್ಣು ತುಂಬಿದ ಬಳ್ಳಿಯ ಹಾಗೆ ನಲಿದಾಡಿದಳು.

ಬಂದು ಬಂದು ಅವನ ಮೈ ಬಳಸಿಕೊಳ್ಳುತ್ತಾ ತಬ್ಬುತ್ತಾ, ಅಶೋಕ ತಿಲಕ ಮರಗಳ ಮುಂದೆ ನಿಂತು ಜಿಗಿದು ಅದರ ಕೊಂಬೆ ಬಗ್ಗಿಸಿ ಹೂ ಕೀಳುತ್ತಾ, ಮತ್ತೇರಿ ನಾಚಿಕೆ ಬಿಟ್ಟು ಋಷಿಯ ಮಗನನ್ನು ಮರುಳು ಮಾಡುತ್ತಾ, ಅವನಲ್ಲಿ ಕೆರಳಿಕೆ ಮೂಡುತ್ತಾ ಇರುವುದನ್ನು ಕಂಡುಕೊಂಡು, ಅವನ ಮೈಯನ್ನೆಲ್ಲ ಹಿಸುಕುತ್ತಾ ಹಿಸುಕುತ್ತಾ ಅವನಲ್ಲಿಟ್ಟ ಕಣ್ಣು ತೆಗೀದೇನೇ, 'ಅಗ್ನಿ ಹೋತ್ರ ಇದೆಯಪ್ಪಾ, ಬರತೀನಿ' ಅಂತ ನಿಧಾನಕ್ಕೆ ಮರೆಯಾಗಿಬಿಟ್ಟಳು.

ಅವಳು ಹೋದಳು, ಇವನು ಕೆರಳಿ ಹೋಗಿದ್ದ. ಮೈಮೇಲೆ ಗ್ಯಾನವೇ ಇರಲಿಲ್ಲ. ಅವಳನ್ನೇ ನೆನೆದುಕೊಂಡು ಖಾಲಿಯಾಗಿಬಿಟ್ಟಿದ್ದ. ಅವನ ಉಸಿರಾಟ ನೋಡಿದರೆ ಅಯ್ಯೋ ಎನಿಸೋದು.

ಸ್ವಲ್ಪ ಹೊತ್ತಾದ ಮೇಲೆ ಸಿಂಹದ ಹಾಗೆ ಕಣ್ಣು ಕೆಂಚಗೆ, ಕಾಲವರೆಗೆ ಜಡೆ ಬಿಟ್ಟುಕೊಂಡು, ಓದು–ಜ್ಞಾನ ತುಂಬಿಕೊಂಡು ಅವರಪ್ಪ ಕಶ್ಯಪ ಎದುರಿಗೆ ನಿಂತ. ಹತ್ತಿರ ಬಂದ. ಮಗ ಒಂಟಿ ಕೂತಿದ್ದ. ಚಿತ್ತ ವಿಪರೀತವಾಗಿತ್ತು. ಕಣ್ಣು ಮೇಲೆ ತೇಲತಾ ಇತ್ತು. ಅವನ ಉಸಿರು ಜೋರಾಗಿ ಬಡಕೋತಾ ಇತ್ತು

**ಕಣ್ವ:** ಇನ್ನೂ ಸಮಿತ್ತು ತಂದಿಲ್ಲವಾ ನನ್ನಪ್ಪನೇ. ಅಗ್ನಿಹೋತ್ರ ಮುಗಿಸೇ ಇಲ್ಲವೇನೋ ನನ ಕಂದಾ. ನನ್ನ ಅಗ್ನಿಕಾರ್ಯಕ್ಕೆ ಅಣಿ ಮಾಡೇ ಇಲ್ಲವಲ್ಲೋ. ಹೋಮದ ಹಸು ಇನ್ನೂ ಅಟ್ಟಿಕೊಂಡೇ ಬಂದಿಲ್ಲವಲ್ಲೋ.

ಯಾವತ್ತೂ ಇಲ್ಲದ ಥರ ಇದೀಯಲ್ಲ ಇವತ್ತು. ತಲೆ ಎಲ್ಲೋ ಇದೆ, ಏನೋ ಚಿಂತೆ ಮಾಡ್ತಿದೀಯ. ಸಂಕಟದಲ್ಲಿರುವವನ ಹಾಗೆ ಕಾಣತೀ. ಮೈಮೇಲೆ ಜ್ಞಾನವೇ ಇಲ್ಲ. ಯಾಕೋ! ಏನಾಯ್ತೊ ಕಂದಾ – ಯಾರಾದರೂ ಬಂದಿದ್ದರಾ?

**ಋಷ್ಯಶೃಂಗ:** ಒಬ್ಬ ಬ್ರಹ್ಮಚಾರಿ ಬಂದಿದ್ದ ಅಪ್ಪಾ. ಜಡೆ ಬಿಟ್ಟುಕೊಂಡಿದ್ದ. ತೀರಾ ಗಿಡ್ಡೂ ಅಲ್ಲ, ತೀರಾ ಎತ್ತರವೂ ಅಲ್ಲ. ಬಂಗಾರದ ಬಣ್ಣಕ್ಕಿದ್ದ. ತಾವರೆ ಹಾಗೆ ಅಗಲದ ಕಣ್ಣು. ದೇವತೆ ಅಂದರೆ ಅವನೇ ಅನ್ನುವ ಹಾಗೆ ಹೊಳೀತಿದ್ದ.

ರೂಪ ತುಂಬಿ ತುಳಕತಾ ಇತ್ತು. ಸೂರ್ಯನ ಥರ ಬೆಳಗುತಿದ್ದ. ಚಕೋರನ ಕಣ್ಣಿನ ಹಾಗೆ ಅವನ ಕಣ್ಣು; ಸುತ್ತಾ ಅಚ್ಚ ಬಿಳಿ, ಅದರೊಳಗೆ ಅಚ್ಚ ಕಪ್ಪು. ಅವನ ಕೂದಲೂ ಅಚ್ಚ ಕಪ್ಪು ಗರಿ ಗರಿಯಾಗಿತ್ತು, ಉದ್ದಕ್ಕಿತ್ತು. ಘಮಾ ಘಮಾ ಅನತಿತ್ತು. ಅದಕ್ಕೆ ಬಂಗಾರದ ಎಳೆಯಲ್ಲಿ ಗಂಟು ಕಟ್ಟಿದ್ದ. ಅವನ ಕೊರಳಲ್ಲಿ ಒಂದು ಥರದ ಒಡವೆ ಇತ್ತು. ಅದು ಮಿಂಚಿನ ಥರ ಇತ್ತು. ಆ ಕೊರಳ ಕೆಳಗೆ ಎರಡು ಉಂಡೆಗಳು ಅದರ ಮೇಲೆ ರೋಮವೇ ಇಲ್ಲ! ಮನಸ್ಸನ್ನೆಲ್ಲ ಸೆಳೆದುಬಿಡುತ್ತೆ ಅದು

ಬರೀ ಹೊಕ್ಕಳಿಗಷ್ಟೇ ಜಾಗ ಅನ್ನೋ ಅಷ್ಟು ಚಿಕ್ಕ ಸೊಂಟ. ಆದರೆ ಟೊಂಕದ ಹಿಂಭಾಗ ದಪ್ಪಕ್ಕಿತ್ತು – ಅಗಲಕ್ಕೂ ಇತ್ತು. ಅವನು ನನ್ನ ಥರದ್ದೇ ಮೌಂಜಿ ಕಟ್ಟಿಕೊಂಡಿದ್ದ – ಹೊಕ್ಕುಳ ಕೆಳಗೆ ಬಟ್ಟೆಯೊಳಗೆ ಫಳಫಳ ಅನ್ನೋದು ಬಂಗಾರದ್ದು ಅದು.

ಉಳಿದದ್ದೂ ಹಾಗೇನೇ. ಅವನ ಮೈಯಲ್ಲಿ ಒಂದೊಂದನ್ನೂ ನೋಡಬೇಕು ಅನಿಸೋದು. ನಡೆದರೆ ಅವನ ಪಾದ ಕಿಣಿಕಿಣಿ ಅಂತ ಸದ್ದು ಮಾಡತಿತ್ತು. ಕೈಗೆ ಸದ್ದು ಮಾಡುವದೇನನ್ನೋ ಕಟ್ಟಿಕೊಂಡಿದ್ದ; ನನ್ನ ಅಕ್ಷಮಾಲೆ ಥರದ್ದೇ, ಆದರೆ ಕಿಣಿಕಿಣಿ ಅನತಿತ್ತು.

ಅವನು ಸ್ವಲ್ಪ ಮಿಸುಕಿದರೆ ಸಾಕು. ಕೊಳದಲ್ಲಿ ಹಂಸಗಳು ಹುಚ್ಚೆದ್ದು ಸದ್ದು ಮಾಡ್ತಾವಲ್ಲ, ಹಾಗೆ ಸದ್ದಾಗುತ್ತಿತ್ತು. ಅವನ ಬಟ್ಟೆ! ಅಂಥದ್ದು ನಾನು ನೋಡೇ ಇಲ್ಲ. ನನ್ನ ಬಟ್ಟೆ ಥರ ಅಲ್ಲ, ತುಂಬಾ ವೈನಾಗಿತ್ತು.

ಅಂಥ ಮುಖ ಯಾವತ್ತೂ ಕಂಡೇ ಇಲ್ಲ. ಅವನು ಮಾತಾಡಿದರೆ ಮನಸೇ ಕುಣಿಯುವಂತಾಗುತ್ತಿತ್ತು. ಅವನ ದನಿ ಗಂಡು ಕೋಗಿಲೆ ದನಿಯ ಹಾಗೆ. ಅದನ್ನ ಕೇಳತಾ ಇದ್ದರೆ ನನ್ನೊಳಗೆ ವಿಲವಿಲ ಅನುತ್ತಿತ್ತು.

ವಸಂತ ಮಾಸದಲ್ಲಿ ಕಾಡೊಳಗೆ ಗಾಳಿ ಬೀಸಿದರೆ ಪರಿಮಳ ಹರಡತ್ತಲ್ಲಾ. ಹಾಗೇನೇ ಗಾಳಿ ಸೋಕಿದರೆ ಸಾಕು ಇವನಿಂದಲೂ ಪುಣ್ಯದ ಪರಿಮಳ ಹರಡತಿತ್ತು.

ಮುಡಿಯನ್ನು ಎಷ್ಟು ಸಮನಾಗಿ ಎರಡು ಭಾಗ ಮಾಡಿಕೊಂಡಿದ್ದ. ಹಣೆಯ ನಡುವಲ್ಲಿ ಸರಿಯಾಗಿ ಅರ್ಧರ್ಧ ಆಗುವ ಹಾಗೆ! ಅವನ ಕಿವಿಯೂ ಚಕ್ರವಾಕದ ಹಾಗೆ ಗುಂಡಕ್ಕೆ ಎರಡೂ ಒಂದೇ ಥರ ಚಂದಕ್ಕೆ ಇತ್ತು.

ಬಲಗೈಲಿ ಒಂದು ಥರದ ದಪ್ಪ ಹಣ್ಣು ಇಟ್ಟುಕೊಂಡಿದ್ದ. ಅದನ್ನ ನೆಲಕ್ಕೆ ಎತ್ತಿ ಹಾಕತಿದ್ದ. ಅದು ನೆಲದಿಂದ ಚಿಮ್ಮಿ ಮತ್ತೆ ಮತ್ತೆ ಮೇಲೇಳುತಾನೇ ಇತ್ತು.

ಅದನ್ನ ನೆಲಕ್ಕೆ ಹಾಕಿ ತನ್ನ ಸುತ್ತ ಒಂದು ಸುತ್ತು ತಿರುಗುತ್ತಿದ್ದ. ಆಗ, ಗಾಳಿ ಬೀಸಿದರೆ ಆಡೋ